ರುಸ್ತುಂಪುರ ಏತ ನೀರಾವರಿ ಪ್ರಾರಂಭಿಸುವ ವಿಚಾರದ ಬಗ್ಗೆ.

392 - ಶ್ರೀ ಉಮೇಶ ಕತ್ತಿ (ಹುಕ್ಕೇರಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಡ್ಕಲ್ ಡ್ಯಾಂ ಯೋಜನೆಯಲ್ಲಿ ಜಮೀನು ಕಳೆದುಕೊಂಡ ನಿರಾಶ್ರಿತರಿಗೋಸ್ಕರ ರುಸ್ತುಂಪುರ ಏತ ನೀರಾವರಿ ಯೋಜನೆ ಪ್ರಾರಂಭಿಸುವ ವಿಚಾರ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಈ ಯೋಜನೆ ಎಂದು ಪ್ರಾರಂಭಿಸಲಾಗುವುದು.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು):

ಅ) ರುಸ್ತುಂಪುರ ಏತ ನೀರಾವರಿ ಯೋಜನೆಯು ಘಟಪ್ರಭಾ ಉಪಕೊಳ್ಳದ ಜಲ ಯೋಜನೆಯಲ್ಲಿ (ವಾಟರ್ ಪ್ಲಾನಿಂಗ್) ಸೇರಿರುವುದಿಲ್ಲ. ಈ ಜಲ ಯೋಜನೆಯನ್ನು (ವಾಟರ್ ಪ್ಲಾನಿಂಗ್) ಪರಿಷ್ಕರಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದ್ದು, ಇದಕ್ಕೆ ಅನುಮೋದನೆ ದೊರಕಿದ ನಂತರವೇ ಈ ಏತ ನೀರಾವರಿ ಯೋಜನೆಯನ್ನು ಕೈಗೊಳ್ಳುವ ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸಲಾಗುವುದು.

ಆ) ಉದ್ಭವಿಸುವುದಿಲ್ಲ.

ಹುಕ್ಕೇರಿ ತಾಲ್ಲೂಕಿನ ಏತ ನೀರಾವರಿ ಯೋಜನೆ ಬಗ್ಗೆ

393 - ಶ್ರೀ ಉಮೇಶ ಕತ್ತಿ (ಹುಕ್ಕೇರಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಕ್ಕೇರಿ ತಾಲ್ಲೂಕಿನ ಕೂಟಬಾಗಿ ಏತ ನೀರಾವರಿ ಯೋಜನೆ ಕಾರ್ಯ ಪ್ರಾರಂಭಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿ ಇದೆಯೇ?

ಆ) ಈ ಯೋಜನೆಗೆ ಖರ್ಚಾಗುವ ಹಣವೆಷ್ಟು ಹಾಗೂ ಈ ಯೋಜನೆಯನ್ವಯ ನೀರಾವರಿಯಾಗಲಿರುವ ಭೂ ಕ್ಷೇತ್ರವೆಷ್ಟು?

ಇ) ಈ ವಾರ್ಷಿಕ ಯೋಜನೆಯಲ್ಲಿ ಕೊಟಬಾಗಿ ಏತ ನೀರಾವರಿ ಪ್ರಾರಂಭಿಸಲಾಗುವುದೇ?

ಶ್ರೀ ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು):

ಅ) ಸಧ್ಯಕ್ಕೆ ಇಲ್ಲ.

ಆ) 1986-87 ರ ದರದಂತೆ ಈ ಯೋಜನೆಯ ಅಂದಾಜು ವೆಚ್ಚ ಸುಮಾರು 8.4 ಕೋಟಿ ರೂ.ಗಳು ಈ ಯೋಜನೆಯಂತೆ ಸುಮಾರು 14880 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಬಹುದೆಂದು ಅಂದಾಜು ಮಾಡಲಾಗಿದೆ.

ಇ) ಇಲ್ಲ.

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನಲ್ಲಿರುವ ಕಬ್ಬೂರ ಮತ್ತು ಮೀಕಾಪರಟ್ಟಿ ಕೆರೆಗಳಿಗೆ ನೀರು ಸರಬರಾಜಿನ ಬಗ್ಗೆ

220 - ಶ್ರೀ ಉಮೇಶ ಕತ್ತಿ (ಹುಕ್ಕೇರಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನಲ್ಲಿ ಕಬ್ಬೂರ ಹಾಗೂ ಮೀರಾಪರಟ್ಟಿ ಕೆರೆಗಳಿಗೆ ಚಿಕ್ಕೋಡಿ ಉಪ ಕಾಲುವೆಯಿಂದ ನೀರು ತುಂಬಿಸುವ ಯೋಜನೆ ಸರ್ಕಾರದಲ್ಲಿ ಇದೆಯೇ?

ಆ) ಈ ಯೋಜನೆಯಿಂದ ಸುಮಾರು 10 ಸಾವಿರ ಎಕರೆ ಜಮೀನು ನೀರಾವರಿ ಆಗಲಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಈ ಯೋಜನೆಯನ್ನು ಈ ವರ್ಷ ಕೈಗೆತ್ತಿಕೊಳ್ಳಲಾಗುವುದೇ?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ.

ಕರ್ನಾಟಕ ರಾಜ್ಯದಲ್ಲಿನ ಅಂಗವಿಕಲರ, ಕಿವುಡ ಮೂಕರ ಶಾಲೆಗಳ ಬಗ್ಗೆ.

860 - ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ) : ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಅಂಗವಿಕಲರ ಕಿವುಡ ಮೂಕರ ಎಷ್ಟು ಶಾಲೆಗಳನ್ನು ಪ್ರಾರಂಭಿಸಲಾಗಿದೆ.

ಆ) ಸದರಿ ಶಾಲೆಗಳನ್ನು ಯಾವ ಯಾವ ಮ್ಯಾನೇಜ್‌ಮೆಂಟುಗಳು ಯಾವ ಯಾವ ಊರುಗಳಲ್ಲಿ ಪ್ರಾರಂಭಿಸಲು ಅನುಮತಿ ನೀಡಲಾಗಿದೆ.

ಇ) ಸದರಿ ಶಾಲೆ ಪ್ರಾರಂಭಿಸಲು ಸರ್ಕಾರದವರ ನಿರ್ದಿಷ್ಟ ನಿಯಾಮಾವಳಿಗಳೇನು?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಮಂತ್ರಿಗಳು):

ಅ) ಅಂಗವಿಕಲರ ಶಾಲೆಗಳು 23

ಕಿವುಡ ಮೂಕರ ಶಾಲೆಗಳು 24

ಸರ್ಕಾರಿ, ಕಿವುಡ ಮೂಕರ ಶಾಲೆಗಳು 4

ಒಟ್ಟು ಶಾಲೆಗಳು 51

ಆ) ಪಟ್ಟಿಯನ್ನು ಲಗತ್ತಿಸಲಾಗಿದೆ.

ಇ) 1982 ಅನುದಾನ ಸಂಹಿತೆಯಲ್ಲಿ ನಮೂದಿಸಲಾಗಿದೆ. ನಿಯಮಗಳನ್ನು ಅನುಸರಿಸಲಾಗುತ್ತಿದೆ.

ಅನುಬಂಧ

ಅಂಗವಿಕಲರ ಕಲ್ಯಾಣ ಇಲಾಖೆಯಡಿಯಲ್ಲಿ ದೈಹಿಕ ಅಂಗವಿಕಲರ ಮತ್ತು ಕಿವುಡರ ಮತ್ತು ಮೂಗರ ಸಂಸ್ಥೆಗಳ ವಿವರ

ಕ್ರ ಸಂ.	ವ್ಯವಸ್ಥಾಪಕರು : ಸಂಸ್ಥೆಯ ಹೆಸರು		ಶಾಲೆಯನ್ನು ನಡೆಸಲು ಅನುಮತಿ ದೊರೆತಿರುವ ಸ್ಥಳದ ಹೆಸರು
1.	ಅಖಿಲ ಕರ್ನಾಟಕ ವೀರಶೈವರ ಮಹಾಸಂಘ ಸಿರಾ	1. 2.	ಸಿರಾ ಮಧುಗಿರಿ
2.	ಶ್ರೀ ವಿನಾಯಕ ವಿದ್ಯಾ ಸಂಸ್ಥೆ ಉಜ್ಜಪ್ಪಾವಡನಹಳ್ಳಿ, ಜಗಳೂರು ತಾ ಚಿತ್ರದುರ್ಗ	1. 2. 3. 4.	ಭದ್ರಾವತಿ ದಾವಣಗೆರೆ ಶಿವಮೊಗ್ಗ ಚಿಕ್ಕಬಳ್ಳಾಪುರ
3.	ಲಕ್ಷ್ಮಿ ವೆಂಕಟೇಶ್ವರ ಸ್ವಾಮಿ ಬೋವಿ ವಿದ್ಯಾ ಸಂಸ್ಥೆ ಚಿತ್ರದುರ್ಗ	1.	ಶಿಕಾರಿಪುರ (ಕಿವುಡರ ಶಾಲೆ-1) ಅಂಗವಿಕಲರ ಶಾಲೆ - 1